**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ. ಎಂ. ಎಫ್. ಸಿ., ಪಾವಗಡ ನ್ಯಾಯಾಲಯ**

**ಓ.ಎಸ್. ಸಂಖ್ಯೆ 222 /2019**

**ದಿನಾಂಕ 08.07.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಿ.ಡಬ್ಲ್ಯೂ 2**

| | | |
|---|---|---|
| ಸಾಕ್ಷಿದಾರರ ಹೆಸರು | - | ಆರ್.ತಿಮ್ಮಯ್ಯ |
| ತಂದೆಯ ಹೆಸರು | - | ರಾಮಯ್ಯ |
| ವಯಸ್ಸು | - | 75 ವರ್ಷ |
| ವೃತ್ತಿ | - | ವ್ಯವಸಾಯ |
| ವಾಸ ಸ್ಥಳ | - | ಹನುಮನಪಾಳ್ಯ ಗ್ರಾಮ |

**ಮುಖ್ಯ ವಿಚಾರಣೆಃ ವಾದಿಗಳ ಪರ ಶ್ರೀಮತಿ.ಡಿ.ಎ.ಎಲ್ ವಕೀಲರಿಂದಃ**

ನಾನು ಈ ದಾವಾದಲ್ಲಿ ವಾದಿಯ ಪರವಾಗಿ ಸಾಕ್ಷಿ ನುಡಿಯಲು ಬಂದಿರುತ್ತೇನೆ. ವಾದಿ ನಮ್ಮ ಊರಿನವರು. ನಾನು ನನ್ನ ಮುಖ್ಯ ವಿಚಾರಣೆಯನ್ನು ಸಾಕ್ಷ್ಯಪ್ರಮಾಣ ಪತ್ರದ ಮೂಲಕ ಸಲ್ಲಿಸಿರುತ್ತೇನೆ. ಸದರಿ ಪ್ರಮಾಣ ಪತ್ರದಲ್ಲಿರುವ ಅಂಶಗಳನ್ನು ನಾನೇ ಖುದ್ದಾಗಿ ಬರೆಯಿಸಿರುತ್ತೇನೆ ಹಾಗೂ ಅದರಲ್ಲಿರುವ ಅಂಶಗಳು ಸತ್ಯವೆಂದು ಪ್ರಮಾಣೀಕರಿಸಿ ಸಹಿ ಮಾಡಿರುತ್ತೇನೆ.

ಸಾಕ್ಷಿಗೆ ನಿಪಿ-1 ನ್ನು ತೋರಿಸಲಾಯಿತು. ಸಾಕ್ಷಿ ಅದರಲ್ಲಿ ತಮ್ಮ ಸಹಿಯನ್ನು ಗುರುತಿಸಿರುತ್ತಾರೆ. ಸದರಿ ಸಹಿ ಈಗಾಗಲೇ ನಿಪಿ-1(ಜಿ) ಎಂದು ಗುರುತಿಸಲ್ಪಟ್ಟಿರುತ್ತದೆ. ನನ್ನ ಸಮಕ್ಷಮ ನಿಪಿ-1 ಕ್ಕೆ ಮುರಳೀಧರ ರವರು ನಿಪಿ-1(ಎಫ್) ರಂತೆ ಸಹಿ ಮಾಡಿರುತ್ತಾರೆ. ಪತ್ರವನ್ನು ದೊಡ್ಡೀರಪ್ಪ ಬರೆದುಕೊಟ್ಟಿದ್ದು, ಸದರಿ ದಾಖಲೆಯಲ್ಲಿ ನಿಪಿ-1(ಸಿ) ರಂತೆ ಸಹಿ ಇರುತ್ತದೆ. ಗಂಗಮ್ಮ ರವರು ದಾಖಲೆಯ ಪ್ರತಿಯ ಪುಟದಲ್ಲೂ ಅವರ ಎಡ ಗೈ ಹೆಬ್ಬೆಟ್ಟಿನ ಗುರುತನ್ನು ಮಾಡಿರುತ್ತಾರೆ. ನಿಪಿ-1 ಪತ್ರವನ್ನು ರಾಜ ಗೋಪಾಲರೆಡ್ಡಿ ಎಂಬುವವರು ಬರೆದಿದ್ದು, ಸದರಿ ದಾಖಲೆಗೆ ಅವರು ಸಹ ನಿಪಿ-1(ಹೆಚ್) ರಂತೆ ಸಹಿ ಮಾಡಿರುತ್ತಾರೆ.

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ.ಎಂ.ಎನ್ವಕೀಲರು ಸಾಕ್ಷಿಯ ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದು, ಆಲಿಸಿ ಮುಂದೂಡಲಾಯಿತು.**

(ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ . ಹೇ. ಕೇ. ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ. ಎಫ್. ಸಿ.,
ಪಾವಗಡ